

ನುಡಿಮುತ್ತು

ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿನಂತೆ.

-ಸುಭಾಷಿತ

ನಿತ್ಯ ಪಂಚಾಂಗ

13-09-2017, ಭಾದ್ರಪದ ಬಹುಳ ಸಪ್ತಮಿ ಬುಧವಾರ

ವಿದ್ಯುತ್ ಸಮಸ್ಯೆ : ಜನ ಸಂಪರ್ಕ ಸಭೆ

ಕೊಣನೂರು: ಬೀದಿ ದೀಪಗಳು, ಕುಡಿಯುವ ನೀರಿನ ಸ್ಥಾವರಗಳು ಹಾಗೂ ಇನ್ನಿತರ ದೈನಂದಿನ ವಿದ್ಯುತ್ ಸಂಬಂಧಿತ ಸಮಸ್ಯೆಗಳಿಗೆ ರಾಮನಾಥಪುರದ ಚಾಂಮುಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮದ ಉಪವಿಭಾಗ ಕಛೇರಿಯ ಆವರಣದಲ್ಲಿ ಅಧೀಕ್ಷಕ ಎಂಜಿನಿಯರ್ ಅಧ್ಯಕ್ಷತೆಯಲ್ಲಿ ಇದೇ ತಿಂಗಳ 15ನೇ ತಾರೀನ ಶುಕ್ರವಾರ ಬೆಳಗ್ಗೆ 11. ಗಂಟೆಯಿಂದ 1.00 ಗಂಟೆಯವರೆಗೆ ಜನಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದ್ದು ಸಾರ್ವಜನಿಕರು ಮನವಿಗಳನ್ನು ಸಲ್ಲಿಸಬಹುದಾಗಿದೆ ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಂ.ಎಸ್.ಮಂಜುನಾಥ್ ತಿಳಿಸಿದ್ದಾರೆ.

ವಿದ್ಯುತ್ ಸ್ಪರ್ಶದಿಂದ ಕುರಿಗಳು ಸಾವು

ಸಕಲೇಶಪುರ: ವಿದ್ಯುತ್ ಸ್ಪರ್ಶದಿಂದ ಕುರಿಗಳು ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಎಪಿಎಂಸಿ ಪಕ್ಕದಲ್ಲಿ ಇರುವ ಜೆಎಸ್‌ಎಸ್ ಶಾಲೆಯ ಹಿಂಭಾಗದ ಪ್ರೇಂನಗರ ಬಡಾವಣೆಯ ಮಂಜು ಎಂಬುವರು ಭಾನುವಾರ ಸಂಜೆ ತಮ್ಮ ಕುರಿಗಳನ್ನು ಮೇಯಿಸಲು ಬಿಟ್ಟು ಸ್ವಲ್ಪ ದೂರಕ್ಕೆ ತೆರಳಿದ್ದರು. ಈ ವೇಳೆ ಶಾಲೆಯ ಹಿಂಭಾಗ ಇದ್ದ ಹಳೆಯ ವಿದ್ಯುತ್ ಕಂಬವೊಂದು ತುಂಡಾಗಿ ಬಿದ್ದಿದೆ. ಈ ವೇಳೆ ವಿದ್ಯುತ್ ತಂತಿ ಕುರಿ ಹಿಂಡಿಗೆ ತಗುಲಿ 4 ಕುರಿಗಳು ಮೃತಪಟ್ಟಿವೆ. ಸ್ಥಳಕ್ಕೆ ಸೆಸ್ಕಾಂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಶಾಲೆಗೆ ರಜೆ ಇದ್ದ ಕಾರಣ ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ. ಪಟ್ಟಣ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ವಿದ್ಯುತ್ ತಂತಿಗಳು ಅಚಾನಕ್ ಆಗಿ ಬಿದ್ದಿದ್ದರಿಂದ 4 ಕುರಿಗಳು ಸಾವನ್ನಪ್ಪಿದೆ. ನಾನು ಬಡವನಾಗಿದ್ದು ಕೂಡಲೇ ಸಂಬಂಧಪಟ್ಟವರು ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಕುರಿಗಳ ಮಾಲೀಕ ಮಂಜು ಮನವಿ ಮಾಡಿದ್ದಾರೆ.

ಗಂಡಸಿ ಪ್ರಾಥಮಿಕ ಕೃಷಿ ಪತ್ತಿನ ಮಹಾಸಭೆ

ಅರಸೀಕೆರೆ: ತಾಲೂಕಿನ ಗಂಡಸಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2016-17ನೇ ಸಾಲಿನ ವಾರ್ಷಿಕ ಮಹಾಸಭೆಯು ಸೆ.13 ರಂದು ಬೆಳಗ್ಗೆ 11ಕ್ಕೆ ಸಂಘದ ಅಧ್ಯಕ್ಷ ಸಿ.ಎಸ್. ಮಹಾಲಿಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕ ಯೋಗೇಶಪ್ಪ, ಲೆಕ್ಕಪರಿಶೋಧಕ ಎಚ್.ಡಿ. ಶಿವಣ್ಣ, ಮೇಲ್ವಿಚಾರಕ ಜಯಕುಮಾರ್ ಭಾಗವಹಿಸುವರು ಎಂದು ಸಂಘದ ಕಾರ್ಯನಿರ್ವಹಣಾಧಿಕಾರಿ ಕೆ.ಎನ್. ಬೋರೆಗೌಡ ತಿಳಿಸಿದ್ದಾರೆ.

ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಪ್ರಥಮ ಸ್ಥಾನ

ಹಾಸನ: ದೊಡ್ಡಬಳ್ಳಾಪುರ ಡಾ. ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ನಡೆದ 99ನೇ ರಾಜ್ಯ ಪರಿಷತ್ ಸಭೆಯಲ್ಲಿ ಹಾಸನ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯನ್ನು ಮೈಸೂರು ವಿಭಾಗದ ಅತ್ಯುತ್ತಮ ಕ್ರಿಯಾತ್ಮಕ ಜಿಲ್ಲಾ ಘಟಕವೆಂದು ಗುರುತಿಸಿ ಪ್ರಥಮ ಸ್ಥಾನ ಪಾರಿತೋಷಕ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಉಪಾಧ್ಯಕ್ಷ ಕೊಂಡಜ್ಜಿ ಷಣ್ಮುಖಪ್ಪ, ಜಿಲ್ಲಾ ಪ್ರಧಾನ ಆಯುಕ್ತ ಡಾ.ವೈ.ಎಸ್. ವೀರಭದ್ರಪ್ಪ, ಸ್ಕೌಟ್ಸ್ ಆಯುಕ್ತ ಪ್ರಕಾಶ್ ಎಸ್.ಯಾಜಿ, ಗೈಡ್ಸ್ ಆಯುಕ್ತ ಎಂ.ಬಿ.ಗಿರಿಜಾಂಬಿಕ, ಜಿಲ್ಲಾ ಸಂಘಟನಾ ಆಯುಕ್ತ ಕೊಟ್ರೇಶ್ ಎಸ್.ಉಪ್ಪಾರ್, ರಾಜ್ಯ ಸಂಘಟನಾ ಆಯುಕ್ತ ಎಲ್.ಟಿ.ಲೋಕೇಶ್ ಇದ್ದರು.

ಎಫ್‌ಡಿಎ, ಎಸ್‌ಡಿಎ ನೇಮಕಾತಿಗೆ ಅರ್ಜಿ ಆಹ್ವಾನ

ಹಾಸನ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ 507 ಎಫ್‌ಡಿಎ ಮತ್ತು 551 ಎಸ್‌ಡಿಎ ಹುದ್ದೆಗಳ ಭರ್ತಿಗೆ ಅರ್ಹರಿಂದ ಕರ್ನಾಟಕ ಲೋಕಸೇವಾ ಆಯೋಗವು ಅ.7 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಕರೆದಿದೆ. ಜಾಲತಾಣ: ಡಿಡಿಡಿ.ಛಿಟಕ್ಷ್ಜ.ಜ್ಟ.ಜ್ಞ ಅರ್ಜಿ ಶುಲ್ಕವಾಗಿ 300 ಪಾವತಿಸಬೇಕು.

ಆಸಕ್ತರು ಎಫ್‌ಡಿಎಗೆ ಯಾವುದೇ ಪದವಿ, ಎಸ್‌ಡಿಎಗೆ ಪಿಯುಸಿ, ಐಟಿಐ, ಡಿಪ್ಲೊಮಾ ಪಾಸಾಗಿರಬೇಕು. ವಯೋಮಿತಿ ಕನಿಷ್ಠ 18 ರಿಂದ 35 ವರ್ಷದೊಳಗಿರಬೇಕು. ಆಯ್ಕೆಯು 100 ಅಂಕಗಳ ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲಿಷ್ ಮತ್ತು 100 ಅಂಕಗಳ ಸಾಮಾನ್ಯ ಜ್ಞಾನ ಪತ್ರಿಕೆಗಳು ಇರುತ್ತವೆ. ಪ್ರತಿ ಪತ್ರಿಕೆಗೂ ಒಂದೂವರೆ ಗಂಟೆ ಅವಧಿಯದ್ದಾಗಿದೆ. ಒಟ್ಟು 200 ಅಂಕಗಳು ಇದ್ದು, ಹೆಚ್ಚು ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು. ಉಚಿತ ವಸತಿ ಸಹಿತ ತರಬೇತಿಯನ್ನು ರಿಯಾಯ್ತಿ ದರಲ್ಲಿ ಕೃಷಿಕ್ ಸರ್ವೋದಯ ಫೌಂಡೇಷನ್ ನೀಡಲಿದೆ. ಅರ್ಜಿ ಸಲ್ಲಿಸುವುದು ಹೇಗೆ, ಸಿದ್ಧತೆ, ಯಾವ ರೀತಿ ಮಾಡಿಕೊಳ್ಳಬೇಕು, ಯಾವ ಯಾವ ಪುಸ್ತಕಗಳನ್ನು ಓದಬೇಕು ಎಂಬಿತ್ಯಾದಿ ವಿವರಕ್ಕಾಗಿ, ಮಾಹಿತಿ, ಮಾರ್ಗದರ್ಶನ, ಸಲಹೆ ಮತ್ತು ತರಬೇತಿಗಾಗಿ ಕೃಷಿಕ್ ಸರ್ವೋದಯ ಫೌಂಡೇಷನ್ ಅಥವಾ ಮೊ.ಸಂ. 9845493336 ಮೂಲಕ ಸಂಪರ್ಕಿಸಿ ಪಡೆಯಬಹುದು.

ಮರದ ದಿಮ್ಮಿ ಬಿದ್ದು ಯುವಕ ಸಾವು

ಹಾಸನ: ಮರದ ದಿಮ್ಮಿ ಬಿದ್ದು ಯುವಕ ಮೃತಪಟ್ಟ ಘಟನೆ ಸಕಲೇಶಪುರ ತಾಲೂಕಿನ ಹೆತ್ತೂರು ಸಮೀಪದ ಕೆಳಹಾಡ್ಯ ಗ್ರಾಮದಲ್ಲಿ ಭಾನುವಾರ ನಡೆದಿದೆ. ಹರಗರಹಳ್ಳಿ ಗ್ರಾಮದ ಸತೀಶ್(27) ಮೃತಪಟ್ಟ ದುರ್ದೈವಿ. ಕೆಳಹಾಡ್ಯದಲ್ಲಿ ಲಾರಿಗೆ ತುಂಬಲು ಮರದ ದಿಮ್ಮಿಯನ್ನು ಇಬ್ಬರು ಕಾರ್ಮಿಕರು ಹೊತ್ತು ಸಾಗುತ್ತಿದ್ದ ವೇಳೆ ಆಯತಪ್ಪಿ ಕೆಳಗೆ ಬಿದ್ದಾಗ ಸತೀಶ್ ಮೇಲೆ ಮರದ ದಿಮ್ಮಿಬಿದ್ದಾಗ ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯ ಮೃತಪಟ್ಟಿದ್ದಾನೆ. ಯಸಳೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರ ವಿರುದ್ಧ ಕ್ರಮಕ್ಕೆ ಆಗ್ರಹ

ಶಿಶು ವಿಹಾರಕ್ಕೆ ಬೀಗ ಜಡಿದು ಕದ್ದೊಯ್ದಿದ್ದ ಅಕ್ಕಿ ಮೂಟೆ ಇಟ್ಟು ಗ್ರಾಮದ ಮಹಿಳೆಯರಿಂದ ಪ್ರತಿಭಟನೆ

ಅಂಗನವಾಡಿ ಕೇಂದ್ರ ಮಟ್ಟನವಿಲೆ

ಚನ್ನರಾಯಪಟ್ಟಣ : ತಾಲೂಕಿನ ಮಟ್ಟನವಿಲೆ ಗ್ರಾಮದ ಅಂಗನವಾಡಿಗೆ ಸರ್ಕಾರ ನೀಡುವ ಪೌಷ್ಟಿಕ ಆಹಾರವನ್ನು ಅಂಗನಾಡಿ ಕಾರ್ಯಕರ್ತೆಯರು ಕದ್ದು ಬೇರೆಡೆಗೆ ಮಾರಾಟ ಮಾಡುತ್ತಿದ್ದು, ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ತಾಲೂಕಿನ ಮಟ್ಟನವಿಲೆ ಗ್ರಾಮದ ಮಹಿಳೆಯರು ಸೋಮವಾರ ಶಿಶುವಿಹಾರಕ್ಕೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಅಂಗನವಾಡಿ ಕಾರ್ಯಕರ್ತೆ ಶಟ್ಟಿಹಳ್ಳಿ ಗ್ರಾಮದ ನಾಗಮಣಿ ಎಂಬುವರು ಆಟೋ ಮೂಲಕ ಅಕ್ಕಿ ಹಾಗೂ ಇತರ ಬೇಳೆ ಕಾಳುಗಳನ್ನು ಬೇರೆಡೆಗೆ ತೆಗೆದುಕೊಂಡು ಹೋಗುತ್ತಿದ್ದರು. ಆಗ ಗ್ರಾಮಸ್ಥ ಕುಮಾರ್ ವಿಡಿಯೋ ಮಾಡುವ ಮೂಲಕ ಸಾಕ್ಷಿ ಸಮೇತ ಈಕೆಯ ಕೃತ್ಯವನ್ನು ಬಹಿರಂಗ ಪಡಿಸಿದ್ದಾನೆ. ತಕ್ಷಣ ಗ್ರಾಮದ ಮಹಿಳೆಯರು ಮಾಲು ಸಮೇತ ಹಿಡಿದು ಈಕೆಯನ್ನು ಪ್ರಶ್ನಿಸಲು ಮುಂದಾದಾಗ ಕಳ್ಳತನ ಮಾಡಿದ್ದ ಮಾಲು ಬಿಟ್ಟು ನಾಗಮಣಿ ಪರಾರಿಯಾಗಿದ್ದಾಳೆ ಎಂದು ಆರೋಪಿಸಿದರು.

ಒಂದು ವಾರದ ಹಿಂದೆ ಅಂಗನವಾಡಿ ಸಹಾಯಕಿ ಕವಿತಾಳು ಕೂಡ ಮಕ್ಕಳಿಗೆ ನಿಡುವ ಆಹಾರ ಪದಾರ್ಥವನ್ನು ತನ್ನ ಮನೆಗೆ ತೆಗೆದುಕೊಂಡು ಹೋಗಿದ್ದರು. ಮಕ್ಕಳಿಗೆ ನೀಡುವ ಆಹಾರವನ್ನು ಮಕ್ಕಳಿಗೆ ನೀಡದೆ ಅಂಗಡಿಗೆ ಮಾರಾಟ ಮಾಡುತ್ತಿರುವ ಇಬ್ಬರನ್ನು ಕರ್ತವ್ಯದಿಂದ ವಜಾ ಮಾಡಬೇಕೆಂದು ಆಗ್ರಹಿಸಿದರು.

ಗ್ರಾಮಸ್ಥರು ಹಿರೀಸಾವೆ ಠಾಣೆಗೆ ದೂರು ನೀಡಲು ಮುಂದಾದಾಗ ಪೊಲೀಸರೇ ಗ್ರಾಮಕ್ಕೆ ಆಗಮಿಸಿದರು, ಶಿಶುವಿಹಾರ ಬಾಗಿಲು ತೆಗೆಯುವಂತೆ ಮನವಿ ಮಾಡಿದರು ಗ್ರಾಮಸ್ಥರು ಬಾಗಿಲು ತೆಗೆಯಲು ಒಪ್ಪಲಿಲ್ಲ.

ನಂತರ ಮಧ್ಯಾಹ್ನ 1ಕ್ಕೆ ಗ್ರಾಮಕ್ಕೆ ಭೇಟಿ ನೀಡಿದ ಸಿಡಿಪಿಒ ಚಂದ್ರಪ್ಪ ಅವರು ಶಿಶಿವಿಹಾರದ ಆಹಾರ ಪದಾರ್ಥಗಳ ಲೆಕ್ಕ ಪತ್ರ ತೆಗೆದುಕೊಂಡು ಲೋಪವಾಗಿದ್ದರೆ ಮೇಲಧಿಕಾರಿಗೆ ವಿಷಯ ತಿಳಿಸಿ ಬೇರೆಡೆಗೆ ವರ್ಗಾವಣೆ ಮಾಡಲಾಗುವುದು ಎಂದು ಭರವಸೆ ನೀಡಿದರು. ನಂತರ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು

ವಿದ್ಯಾರ್ಥಿಗಳ ಜೀವನ ಅತ್ಯಂತ ಸೂಕ್ಷ್ಮ

ಆಲೂರು : ವಿದ್ಯಾರ್ಥಿಗಳ ಜೀವನ ಅತ್ಯಂತ ಸೂಕ್ಷ್ಮವಾದುದಾಗಿದ್ದು, ಉತ್ತಮ ಮಾರ್ಗದಲ್ಲಿ ನಡೆಯುವ ಪ್ರಯತ್ನ ಮಾಡಿದರೆ ಮಾತ್ರ ಬದುಕಿನಲ್ಲಿ ಸಾಧನೆ ಮಾಡಬಹುದು ಎಂದು ಕಾರ್ಜುವಳ್ಳಿ ಹಿರೆಮಠದ ಶ್ರೀ ಶಂಭು ಲಿಂಗಶಿವಾಚಾರ್ಯ ಸ್ವಾಮೀಜಿ ಕಿವಿಮಾತು ಹೇಳಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ತಾಲೂಕು ವೀರಶೈವ ಸಂಘದ ವತಿಯಿಂದ ಭಾನುವಾರ ನಡೆದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಹಣ, ಸಮಯ ಹಾಗೂ ಬದುಕಿನ ಬೆಲೆಯನ್ನು ಅರಿತು ಬಾಳಿದರೆ ಸಾಧನೆ ಮಾಡಬಹುದು. ಪ್ರಸುತ್ತ ದಿನಗಳಲ್ಲಿ ತಂದೆ-ತಾಯಿಗಳು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಹಗಲಿರುಳು ಕೂಲಿ ಕೆಲಸ ಮಾಡಿ ಶ್ರಮಿಸುತ್ತಿದ್ದಾರೆ. ವಿದ್ಯಾರ್ಥಿಗಳು ಇದನ್ನು ಮನದಲ್ಲಿಟ್ಟು ತಮ್ಮ ಅಮೂಲ್ಯವಾದ ಸಮಯವನ್ನು ಹಾಳುಮಾಡದೆ ಒಳ್ಳೆಯ ಮಾರ್ಗದಲ್ಲಿ ನಡೆದು ತಮ್ಮ ತಂದೆ-ತಾಯಿಗೆ ಕೀರ್ತಿ ತರುವಂತಹ ಕೆಲಸ ಮಾಡಬೇಕು ಎಂದರು.

1904ರಲ್ಲಿ ಅನುಗಲ್ಲು ಕುವಾರ ಶಿವಯೋಗಿ ಹುಟ್ಟುಹಾಕಿದಂತಹ ಅಖಿಲ ಭಾರತೀಯ ವೀರಶೈವ ಸಂಘವು ಪ್ರಸುತ್ತ ದಿನಗಳಲ್ಲಿ ಕೆಲವು ಸ್ವಹಿತ ರಾಜಕೀಯ ವ್ಯಕ್ತಿಗಳಿಂದ ಸಮಾಜದಲ್ಲಿ ವೀರಶೈವ ಬೇರೆ-ಲಿಂಗಾಯತ ಬೇರೆ ಎಂದು ಬೇಧ ಭಾವ ಎಸಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ವೀರಶೈವ ಮೂಲ ಪದ-ಲಿಂಗಾಯತ ರೂಢಿ ಪದ ಅಷ್ಟೆ. ಇಲ್ಲಿ ಯಾವುದೇ ಭೇದವಿಲ್ಲ ಎಂದು ಹೇಳಿದರು.

ಪಂಚಪೀಠ ಪರಂಪರೆಗಳು ಹಾಗೂ ವೀರಕ್ತ ಪೀಠ ಪರಂಪರೆಗಳು ಒಟ್ಟುಗೂಡಿ ಗುರುವಿರಕ್ತ ಸಮನ್ವಯ ಸಮಿತಿಯಲ್ಲಿ ಜಗದ್ಗುರು ಶಂಕರಚಾರ್ಯರ, ಜಗಜ್ಯೋತಿ ಬಸವಣ್ಣನವರ ಹಾಗೂ ಅನುಗಲ್ಲು ಕುವಾರಶಿವಯೋಗಿಗಳ ಮಹೋತ್ಸವ ಕಾರ್ಯಕ್ರಮವನ್ನು ಒಂದೇ ದಿನದಲ್ಲಿ ಮಾಡುವಂತೆ ಒಪ್ಪಿಗೆ ನೀಡಿದ್ದು, ತಾಲೂಕು ವೀರಶೈವ ಸಂಘ ವತಿಯಿಂದ ಮುಂದಿನ ದಿನಗಳಲ್ಲಿ ಈ ಆಚರಣೆಯನ್ನು ಮಾಡಲಾಗುವುದು ಎಂದು ತಿಳಿಸಿದರು.

ತಾಲೂಕು ವೀರಶೈವ ಸಂಘದ ಅಧ್ಯಕ್ಷ ರೇಣುಕಾ ಪ್ರಸಾದ್ ಮಾತನಾಡಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಿಂದ ಮಕ್ಕಳಿಗೆ ಚೈತನ್ಯ ಹೆಚ್ಚಾಗುವುದರ ಜತೆಗೆ ಮುಂದಿನ ವಿದ್ಯಾಭ್ಯಾಸದಿಂದ ಸಮಾಜದಲ್ಲಿ ಉನ್ನತ ಮಟ್ಟಕ್ಕೇರಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಹಳೇಬೀಡು ಭಾಗದಲ್ಲಿ ಭಾರಿ ಮಳೆ : ಕೆರೆಯಲ್ಲಿನ ಗುಂಡಿಗಳಲ್ಲಿ ನೀರು

ಬೇಲೂರು : ಕಳೆದ ಎಂಟು ವರ್ಷದಿಂದ ಕಂಡರಿಯದಂತಹ ಮಳೆ ಕೆಲ ದಿನಗಳಿಂದ ಭಾರಿ ಅಬ್ಬರದಲ್ಲಿ ಸುರಿದು ರೈತಾಪಿ ಜನರ ಮನದಲ್ಲಿ ಹರುಷ ಮೂಡಿಸಿದೆ.

ಹಳೇಬೀಡು ಹೋಬಳಿಯ ಗೋಣಿಸೋಮೇನಹಳ್ಳಿ, ಅಡಗೂರು, ಘಟ್ಟದಹಳ್ಳಿ ಸೇರಿದಂತೆ ಹಲವು ಭಾಗದಲ್ಲಿ ಮಳೆ ಬಂದಿರುವುದು ರೈತರಿಗೆ ಖುಷಿಕೊಟ್ಟಿದೆ. ಒಣಗಿ ಬಾಯಾರಿದ್ದ ನೆಲ ನೆಮ್ಮದಿಯಾಗಿ ನೀರು ಕುಡಿದಿದೆ. ಕೇವಲ ಎರಡು ದಿನದ ಮಳೆಗೆ ಬತ್ತಿಹೋಗಿದ್ದ ಹಲವು ಕೊಳವೆ ಬಾವಿಗಳಲ್ಲಿ ನೀರು ಬರ ತೊಡಗಿದೆ. ಪಟ್ಟಣದ ಜನರಂತೂ ಮಳೆಯನ್ನೇ ದೊಡ್ಡ ಸುದ್ದಿಯಾಗಿ ಮಾತನಾಡಿಕೊಳ್ಳುತ್ತಿದ್ದಾರೆ.

ಕೆರೆಕಟ್ಟೆಗಳಿಗೆ ನೀರು:

ಹಳೇಬೀಡಿನ ದ್ವಾರಸಮುದ್ರದಲ್ಲಿ ನೀರಿನ ಹರಿವು ಕಾಣಿಸಿಕೊಂಡಿದೆ. ಕೆರೆಯಲ್ಲಿ ಗೋಡು ತೆಗೆದಿದ್ದ ಗುಂಡಿಗಳಲ್ಲಿ ನೀರು ಅಲ್ಪ ಪ್ರಮಾಣದಲ್ಲಿ ಶೇಖರಣೆಗೊಳ್ಳುತ್ತಿದೆ. ಈ ಭಾಗದ ಸುತ್ತಲಿನ ಹಲವು ಕೆರೆಕಟ್ಟೆಗಳಲ್ಲಿ ನೀರಿನ ಸಂಗ್ರಹ ಉಂಟಾಗಿದೆ. ಬತ್ತಿದೆ ಬೆಳೆಗಳು ನಳನಳಿಸುತ್ತಿವೆ. ಇನ್ನು 2 ಅಥವಾ 3 ದಿನ ಇದೆ ರೀತಿ ಮಳೆ ಬಂದರೆ ಕೆರೆ,ಕುಂಟೆಗಳು, ಹಳ್ಳಕೊಳ್ಳಗಳಲ್ಲಿ ನೀರಿನ ಹರಿವು ಹೆಚ್ಚಾಗಿ ಅಂತರ್ಜಲವೂ ಹೆಚ್ಚಾಗಲಿದೆ. ಇನ್ನೂ ಹಲವು ಕೊಳವೆಬಾವಿಗಳು ಪುನರ್ಜನ್ಮ ಪಡೆಯಲಿವೆ ಎನ್ನುತ್ತಾರೆ ಈ ಭಾಗದ ರೈತರು.

ಹಳೇಬೀಡು ವ್ಯಾಪ್ತಿಯಲ್ಲಷ್ಟೆ ಅಲ್ಲದೆ ಬೇಲೂರು ಪಟ್ಟಣ, ಮಲೆನಾಡ ಭಾಗವಾದ ಅರೇಹಳ್ಳಿ, ಬಿಕ್ಕೋಡು, ಚೀಕನಹಳ್ಳಿ, ಗೆಂಡೇಹಳ್ಳಿ ಈ ಭಾಗದಲ್ಲೂ ಮಳೆಯಾಗಿದೆ. ಹಾಸನ ರಸ್ತೆಯ ಹಗರೆ, ಸಂಕೇನಹಳ್ಳಿ ಇಲ್ಲಿ ಅಲ್ಪ ಪ್ರಮಾಣದ ಮಳೆಯಾಗಿದೆ.

ವಿದ್ಯಾವಂತರಿಂದಲೇ ಮೌಢ್ಯಾಚರಣೆ ರೂಢಿ: ಲತಾ

ಬೇಲೂರು : ವಿದ್ಯಾವಂತರಿಂದಲೇ ಸದೃಢ ಸಮಾಜಕ್ಕೆ ಮಾರಕವಾಗುವ ಮೌಢ್ಯಾಚರಣೆ ರೂಢಿಯಲ್ಲಿದೆ ಎಂದು ಜಿಲ್ಲಾ ಪಂಚಾಯುತಿ ಸದಸ್ಯೆ ಲತಾ ಮಂಜೇಶ್ವರಿ ತೀವ್ರ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಪುಟ್ಟಮ್ಮ ಚನ್ನಕೇಶವೇಗೌಡ ಕಲ್ಯಾಣ ಮಂಟಪದಲ್ಲಿ ತಾಲೂಕು ಸಾಕ್ಷರತಾ ಸಮಿತಿ ಹಾಗೂ ಬೇಲೂರಿನ ಭಾರತ್ ಜ್ಞಾನ ವಿಜ್ಞಾನ ಸಮಿತಿ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಸಾಕ್ಷರಾತಾ ದಿನಾಚಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಈಗಾಗಲೇ ಸಾಕ್ಷರತಾ ಪ್ರಮಾಣ ಹೆಚ್ಚಿದೆ. ಆದರೆ, ಅಜ್ಞಾನದಿಂದ ಸುಜ್ಞಾನದ ಕಡೆ ಜನರು ಇನ್ನು ಮುಖ ಮಾಡಿಲ್ಲ. ಬಿ.ಆರ್.ಅಂಬೇಡ್ಕರ್ ಹೇಳುವಂತೆ ದೇಶದ ಪ್ರತಿ ಮಹಿಳೆಯರು ದೇಗುಲದ ಬಳಿ ಸಾಲುಗಟ್ಟಿ ನಿಲ್ಲುವ ಬದಲು ಎಂದೂ ಗ್ರಂಥಾಲಯಕ್ಕೆ ಹೋಗುತ್ತಾರೆ ಆಗ ಮಾತ್ರ ದೇಶದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು.

ಅಕ್ಷರ ಜ್ಞಾನ ಅಮೂಲ್ಯ ಹಾಗೂ ಅನನ್ಯವಾಗಿದೆ, ಇಂತಹ ಅಕ್ಷರವನ್ನು ಕಲಿತವರು ಇನ್ನೊಬ್ಬರಿಗೆ ಕಲಿಸುವ ನಿಟ್ಟಿನಲ್ಲಿ ಮುಂದಾಗಬೇಕು. ಇಂತಹ ಕಾರ್ಯಕ್ರಮಗಳು ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು ಎಂದು ಸಲಹೆ ನೀಡಿದರು.

ಸಂಪನ್ಮೂಲ ಅಧಿಕಾರಿ ಟಿ.ಡಿ. ತಮ್ಮಣ್ಣಗೌಡ ಮಾತನಾಡಿ, ಪ್ರಜಾಪ್ರಭುತ್ವದ ನೆಲಗಟ್ಟ ಭದ್ರತೆ ಅಕ್ಷರ ಜ್ಞಾನ ಅಗತ್ಯವಾಗಿದೆ. ಕಳೆದ 20 ವರ್ಷದಿಂದ ನಡೆದ ಸಾಕ್ಷರತೆ ಜಾಥ ದೇಶದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಿದೆ. ಅಕ್ಷರ ಜ್ಞಾನವು ವೈಚಾರಿಕೆ ಮನೋಭಾವನೆ ಮೂಡಬೇಕು ಎಂದರು.

ತಾಲೂಕು ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷ ಸೋಮಂಣ್ಯ, ತಾಪಂ ಉಪಾಧ್ಯಕ್ಷೆ ತೀರ್ಥಮ್ಮ, ಕಾರ್ಯನಿರ್ವಾ ಹಣಾಧಿಕಾರಿ ಮಲ್ಲೇಶಪ್ಪ, ತಾಪಂ ಸದಸ್ಯ ರಂಗೇಗೌಡ, ಸಾಕ್ಷರತಾ ಸಂಯೋಜಕ ಅಂತೋನಿ ಹಾಗೂ ಭಾರತ್ ಜ್ಞಾನ ವಿಜ್ಞಾನ ಸಮಿತಿ ಸೌಭಾಗ್ಯ ಹಾಗೂ ರಂಗಸ್ವಾಮಿ ಹಾಗೂ ಗಂಗಾಧರ್ ಇತರರು ಇದ್ದರು.

ಸಕ್ಕರೆ ಖಾಯಿಲೆ ಸಿರಿಧಾನ್ಯ ಬಳಕೆಯೇ ಮದ್ದು

ಹಾಸನ : ಬದಲಾಗುತ್ತಿರುವ ಕಾಲಮಾನದಲ್ಲಿ ಇಂದಿನ ಆಹಾರ ಪದ್ಧತಿಯು ಬದಲಾಗುತಿದ್ದು, ಇದರ ಪರಿಣಾಮ ಜನರಲ್ಲಿ ರಕ್ತದೊತ್ತಡ, ಸಕ್ಕರೆ ಕಾಯಿಲೆ ಹೆಚ್ಚುತ್ತಿದೆ. ಇದನ್ನು ತಡೆಗಟ್ಟಲು ಪರ್ಯಾಯ ಮಾರ್ಗವಾಗಿ ಸಿರಿಧ್ಯಾನಗಳನ್ನು ಬಳಕೆ ಮಾಡುಬೇಕು ಎಂದು ಕೃಷಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಎಸ್.ಟಿ. ಭೈರಪ್ಪ ತಿಳಿಸಿದರು.

ಹಾಸನದ ಕೃಷಿ ಕಾಲೇಜಿನ ವತಿಯಿಂದ ಅಡಗೂರು ಗ್ರಾಮದಲ್ಲಿ ಇತ್ತೀಚೆಗೆ ಏರ್ಪಡಿಸಿರುವ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಕ್ಷೇತ್ರ ಬೆಳೆಗಳ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸಿರಿಧಾನ್ಯಗಳಲ್ಲಿ ಶರ್ಕರ ಪ್ರಮಾಣ ಕಡಿಮೆ ಇದ್ದು, ಇದು ರಕ್ತದಲ್ಲಿ ಸಕ್ಕರೆ ಪ್ರಮಾಣ ಕಡಿಮೆಗೊಳಿಸುತ್ತದೆ. ಇವುಗಳು ಕಡಿಮೆ ನೀರು ಬರಗಾಲದಲ್ಲಿಯು ಉತ್ತಮ ಇಳುವರಿ ಕೊಡುವ ಬೆಲೆಗಳಾಗಿವೆ ಎಂದರು.

ಸಿರಿಧಾನ್ಯಗಳಾದ ನವಣೆ, ಸಜ್ಜೆ, ಕೊರಲೆ, ಬರಗು, ಹೂದಲು ಇತ್ಯಾದಿ ಇವುಗಳು ನಮ್ಮ ಆರೋಗ್ಯವನ್ನು ಸುಧಾರಿಸುವುದಲ್ಲದೆ ರೈತರಿಗೆ ಉತ್ತಮ ಆದಾಯವನ್ನು ಕೊಡುವ ಬೆಳೆಗಳಾಗಿವೆ ಎಂದು ತಿಳಿಸಿದರು.

ಸಿರಿಧಾನ್ಯಗಳ ಬೆಲೆ ಏರುಗತಿಯಲ್ಲಿ ಸಾಗಿದ್ದು, ಮುಂದಿನ ದಿನಗಳಲ್ಲಿ ಗೋಧಿ, ಅಕ್ಕಿಗೆ ಪರ್ಯಾಯವಾಗಿ ಬಳಸುವ ದಿನಗಳು ಬಹಳ ಸನಿಹವಾಗಿವೆ. ರೈತರು ಇದರ ಲಾಭವನ್ನು ಪಡೆಯಬೇಕು ಹಾಗೂ ಸಿರಿಧನ್ಯಗಳನ್ನು ಬೆಳೆಯಲು ಅಗತ್ಯವಾದ ಬೀಜ ಹಾಗೂ ಮಾರುಕಟ್ಟೆಯನ್ನು ಕೃಷಿ ಕಾಲೇಜು ಒದಗಿಸುತ್ತದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಬೆಳೆಯುವ ಕ್ರಮ, ಪೋಷಕಾಂಶಗಳ ನಿರ್ವಹಣೆ, ನೀರು ನಿರ್ವಹಣೆ, ರೋಗ ಹಾಗೂ ಕೀಟ ನಿಯಂತ್ರಣ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೆರೆದಿದ್ದ ರೈತರಿಗೆ ತಿಳಿಸಿಕೊಟ್ಟರು.

ಡಾ. ಬಿ.ಎಸ್. ಬಸವರಾಜ ಮಾತನಾಡಿ, ಸಿರಿಧಾನ್ಯಗಳಲ್ಲಿ ರೋಗ ಮತ್ತು ಕೀಟಬಾಧೆ ಕಡಿಮೆ ಇದ್ದು, ರೈತರು ಯಾವುದೆ ವೆಚ್ಚವಿಲ್ಲದೆ ಬೆಳೆಗಳನ್ನು ಬೆಳೆಯಬಹುದು ಎಂದು ತಿಳಿಸಿದರು. ಡಾ.ಜಿ.ಜಿ. ಕಾದಳ್ಳಿ, ಶಿಬಿರಾರ್ಥಿಗಳು ಹಾಗು ಗ್ರಾಮಸ್ಥರು ಇದ್ದರು.

ಸಾಲ ವಸೂಲಿಗಾಗಿ ವ್ಯಕ್ತಿ ಅಪಹರಣ

ಹಾಸನ : ಕೊಟ್ಟ ಸಾಲವನ್ನು ಹಿಂದಕ್ಕೆ ಪಡೆಯುವ ಸಲುವಾಗಿ ಎಲೆಕ್ಟ್ರಿಷಿಯನ್ ಒಬ್ಬರನ್ನು ಅಪಹರಿಸಿದ್ದ ಮೂವರನ್ನು ನಗರದ ಪೊಲೀಸರು ಬಂಧಿಸಿದ್ದಾರೆ.

ಹಾಸನ ನಗರದ ಗುಂಡೇನಹಳ್ಳಿಯಲ್ಲಿ ಇದ್ದ ಎಲೆಕ್ಟ್ರಿಷಿಯನ್ ಸಂತೋಷ್ ಎಂಬಾತನೇ ಅಪಹರಣಕ್ಕೆ ಒಳಗಾಗಿದ್ದ ವ್ಯಕ್ತಿ. ಕನಕಪುರ ತಾಲೂಕು ಕೊಳಗೋಡನಹಳ್ಳಿಯ ರಾಜು ಮುತ್ತು (40), ಬೆಂಗಳೂರು ನಗರದ ಸಯ್ಯದ್ ಫಯಾಜ್ (32) ಮತ್ತು ಹಾಸನ ನಗರದ ಅಮೀರ್ ಮೊಹಲ್ಲಾದ ಫಯಾಜ್ ಅಹಮದ್ (31) ಬಂಧಿತರು.

ಘಟನೆ ವಿವರ: ಸಂತೋಷ್ ಕೆಲ ವರ್ಷಗಳ ಹಿಂದೆ ಹೊಳೆನರಸೀಪುರ ತಾಲೂಕು ಕಡುವಿನಹೊಸಳ್ಳಿ ಮತ್ತಿತರ ಕಡೆ ಮನೆಗಳ ಎಲೆಕ್ಟ್ರಿಕ್ ಕೆಲಸ ಮಾಡಿಕೊಂಡಿದ್ದರು. ಈ ವೇಳೆಯೇ ಅಲ್ಲಿನ ಕೆಪಿಟಿಸಿಎಲ್‌ನಲ್ಲಿ ಕೆಲ ದಿನಗಳವರೆಗೆ ಹಂಗಾಮಿ ಎಲೆಕ್ಟ್ರೀಷಿಯನ್ ಆಗಿ ಕೆಲಸ ಮಾಡಿ ಬಿಟ್ಟಿದ್ದ.

ಈ ವೇಳೆ ಕೆಪಿಟಿಸಿಎಲ್ ಸಹಾಯಕ ಎಂಜಿನಿಯರ್ ಆಗಿದ್ದ ದೀಪ್ತಿ ಎಂಬುವರು ತಮ್ಮ ಸ್ನೇಹಿತ ರಾಜು ಮುತ್ತು ಎಂಬುವರಿಂದ 50 ಸಾವಿರ ಸಾಲ ಕೊಡಿಸಿದ್ದರು. ನಂತರ ಸಂತೋಷ್ ಸಾಲ ಹಿಂತಿರುಗಿಸಿರಲಿಲ್ಲ. ಆಗ ರಾಜು ಮುತ್ತು ಮತ್ತು ಆತನ ಸ್ನೇಹಿತರು, ಸಂತೋಷನನ್ನು ವಾಹನದಲ್ಲಿ ಬೆಂಗಳೂರಿಗೆ ಕರೆದುಕೊಂಡು ಹೋಗಿ ಇಟ್ಟುಕೊಂಡು, ಸಂತೋಷ ಕಡೆಯವರಿಗೆ ಮೊಬೈಲ್ ಕರೆ ಮಾಡಿ 7 ಲಕ್ಷ ನೀಡಿದರೇ ಬಿಟ್ಟು ಕಳುಹಿಸುತ್ತೇವೆ ಎಂದು ಬೆದರಿಕಿ ಹಾಕಿದ್ದರು.

ಈ ವಿಷಯವನ್ನು ತಿಳಿದು ಬೆಂಗಳೂರಿನ ಜಯನಗರ ಮತ್ತು ರಾಜರಾಜೇಶ್ವರಿ ನಗರದಲ್ಲಿ ಇದ್ದ ಆರೋಪಿಗಳನ್ನು ಬಂಧಿಸಲಾಯಿತು ಎಂದು ಎಸ್ಸೈ ಹರೀಶ್ ತಿಳಿಸಿದ್ದಾರೆ.

ಬಾಲ ಮಂದಿರದ ಮಕ್ಕಳಿಗೆ ಸ್ಪರ್ಧೆ

ಹಾಸನ: ಶಿಕ್ಷಕರ ದಿನಾಚರಣೆ ಅಂಗವಾಗಿ ನಗರದ ಮಹಾರಾಜ ಪಾರ್ಕ್ ಬಳಿ ಇರುವ ಬಾಲ ಮಂದಿರ ಮಕ್ಕಳಿಗೆ ರೋಟರಿ ಕ್ಲಬ್ ಸಂಯುಕ್ತಾಶ್ರಯದಲ್ಲಿ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಉತ್ತಮ ಚಿತ್ರ ಬಿಡಿಸಿದ ಮಕ್ಕಳಿಗೆ ಅಧ್ಯಕ್ಷ ಹೆಚ್.ಪಿ. ಶಿವಕುಮಾರ್, ಝೋನ್ ಲೆಫ್ಟಿನೆಂಟ್ ಎ.ಎಂ. ರಘು, ಕಾರ್ಯದರ್ಶಿ ರಮಾನಂದ್, ಖಜಾಂಚಿ ಪ್ರದೀಪ್ ಕುಮಾರ್ ಬಹುಮಾನ ವಿತರಿಸಿ ಅಭಿನಂದಿಸಿದರು.

ಶನೇಶ್ವರ ದೇವಾಲಯದಲ್ಲಿ ಕಳವು

ಶ್ರವಣಬೆಳಗೊಳ : ಹೋಬಳಿಯ ಜಿನ್ನೇನಹಳ್ಳಿ ಸರ್ಕಲ್ ಬಳಿ ಇರುವ ಶ್ರೀ ಶನಿದೇವರ ದೇವಸ್ಥಾನದಲ್ಲಿ ಬೀಗ ಮುರಿದು ಹುಂಡಿಯನ್ನು ದೋಚಿರುವ ಘಟನೆ ಇತ್ತೀಚೆಗೆ ನಡೆದಿದೆ.

ಹುಂಡಿಯಲ್ಲಿ ಇದ್ದ ಸುಮಾರು ನಾಲ್ಕೈದು ಸಾವಿರ ಹಣವನ್ನು ದೋಚಿರುವ ಕಳ್ಳರು, ದೊಡ್ಡ ಹುಂಡಿಯನ್ನು ಹೊಡೆಯಲು ಯತ್ನಿಸಿ ವಿಫಲರಾಗಿದ್ದಾರೆ. ಆದರೆ ದೇವರ ವಿಗ್ರಹದಲ್ಲಿದ್ದ ಒಡವೆ ಹಾಗೂ ಬೆಳ್ಳಿ ಪದಾರ್ಥಗಳನ್ನು ಮುಟ್ಟಿಲ್ಲ. ಕೇವಲ ಹಣಕ್ಕಾಗಿ ಕಳ್ಳತನ ನಡೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ರಾತ್ರಿಯಿಡೀ ಮಳೆ ಸುರಿಯುತ್ತಿದ್ದ ಕಾರಣ ದೇವಸ್ಥಾನದ ಬಾಗಿಲ ಬೀಗ ಒಡೆಯುವ ಮತ್ತು ಹುಂಡಿ ಒಡೆಯುವ ಶಬ್ಧವಾಗಲಿ ಅಕ್ಕ-ಪಕ್ಕದವರಿಗೆ ಕೇಳಿಸಿಲ್ಲ. ಈ ಕಳ್ಳತನ ನಡೆಯಲು ಪೊಲೀಸರ ನಿರ್ಲಕ್ಷವೇ ಕಾರಣ. ಮೊದಲು ಬೀಟ್ ವ್ಯವಸ್ಥೆ ಮಾಡುತ್ತಿದ್ದ ಪೊಲೀಸರು ಈಗ ಮಾಡುತ್ತಿಲ್ಲ ಎಂದು ಸಾರ್ವಜನಿಕರು ದೂರುತ್ತಾರೆ.

ಶ್ರವಣಬೆಳಗೊಳ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ದೇಗುಲ ಜಾಗ ಪರಿಶೀಲನೆಗೆ ಡಿಸಿಗೆ ಮನವಿ

ಹಾಸನ : ಆಲೂರು ತಾಲೂಕಿನ ಕಾರ್ಜುವಳ್ಳಿಯ ಕಲ್ಲೇಶ್ವರ ದೇವಾಲಯ ಜಾಗವನ್ನು ಮುಳುಗಡೆ ಪತ್ರ ತೋರಿಸಿ ತಮಗೆ ಮಂಜೂರು ಮಾಡಿಕೊಡುವಂತೆ ಕೆಲವರು ತೊಂದರೆ ಕೊಡುತ್ತಿದ್ದಾರೆ. ಹಾಗಾಗಿ ಕೂಡಲೇ ಸಂಬಂಧಪಟ್ಟವರು ಸ್ಥಳ ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿ ಗ್ರಾಮಸ್ಥರು ಸೋಮವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಗ್ರಾಮದ ಸರ್ವೆ ನಂಬರ್ 164 ರಲ್ಲಿ 276. 22 ಗುಂಟೆ ಜಮೀನು ಇದೆ. ಇದರಲ್ಲಿ 100 ಎಕರೆ ಹೇಮಾವತಿ ಜಲಾಶಯಕ್ಕೆ ನಿಗದಿಪಡಿಸಲಾಗಿದೆ. ಪುರಾತನ ಕಾಲದಲ್ಲೇ ಕಲ್ಲಿನಿಂದ ಶ್ರೀ ಕಲ್ಲೇಶ್ವರ ಸ್ವಾಮಿ ದೇವಾಲಯ ನಿರ್ಮಿಸಲಾಗಿದೆ. ಅಲ್ಲದೆ, ದೇವಾಲಯ ನಿರ್ವಹಣೆ ಮುಜರಾಯಿ ಇಲಾಖೆಗೆ ಸೇರಿದೆ ಎಂದು ತಿಳಿಸಿದರು.

ಸಂಪ್ರದಾಯಬದ್ಧವಾಗಿ ಪ್ರತಿವರ್ಷ ಅಲ್ಲಿ ಜಾತ್ರೆ, ಉತ್ಸವ, ದಸರಾ ದಿವಸ, ಬನ್ನಿ ಮಹೋತ್ಸವ ಆಚರಿಸುತ್ತೇವೆ. ದೇವಾಲಯದ ಸುತ್ತಲೂ ಇರುವ 4 ಎಕರೆಯನ್ನು ಬೇರೆಯವರಿಗೆ ಕೊಟ್ಟಿಲ್ಲ. ಆದರೆ, ಇತ್ತೀಚೆಗೆ ಒಂದಿಬ್ಬರು ಜಮೀನು ಕಬಳಿಸುವ ದುರುದ್ದೇಶದಿಂದ ಹೇಮಾವತಿ ಮುಳುಗಡೆ ದಾಖಲೆ ತೋರಿಸಿ ಮಂಜೂರು ಮಾಡಿಕೊಡುವಂತೆ ಸರ್ಕಾರಿ ಅಧಿಕಾರಿಗಳಿಗೆ ವಿನಾಃ ಕಾರಣ ಒತ್ತಡ ಹಾಕುತ್ತಿದ್ದಾರೆ.

ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಗ್ರಾಮಸ್ಥರಾದ ವಿಶ್ವನಾಥ್, ಸಂತೋಷ್, ಗಿರೀಶ್, ಮಲ್ಲೇಶ್, ಸುರೇಶ್, ರಾಜಶೇಖರ್, ಕೆ.ಪಿ.ರುದ್ರೇಗೌಡ, ಚಂದ್ರಶೇಖರ್ ಇದ್ದರು.

ಬೇಲೂರು ತಾಪಂ ಪ್ರಭಾರ ಅಧ್ಯಕ್ಷೆ: ತೀರ್ಥಮ್ಮ

ಬೇಲೂರು: ನೂತನ ತಾಲೂಕು ಪಂಚಾಯಿತಿ ಪ್ರಭಾರೆ ಅಧ್ಯಕ್ಷೆಯಾಗಿ ತೀರ್ಥಮ್ಮ ದೊರೆಸ್ವಾಮಿ ಸೋಮವಾರ ಅಧಿಕಾರ ಸ್ವೀಕರಿಸಿದರು.

ಅಧ್ಯಕ್ಷೆ ಹುದ್ದೆಗೆ ಪಕ್ಷದ ಜೆಡಿಎಸ್ ವರಿಷ್ಟರ ತೀರ್ಮಾನದಂತೆ 16 ತಿಂಗಳ ಕಾಲಾವಧಿ ಮುಗಿದ ನಂತರ ಕಳೆದ ಆ.23ರಂದು ಬಾಣಸವಳ್ಳಿ ಅಶ್ವಥ್ ರಾಜಿನಾಮೆ ಸಲ್ಲಿಸಿದ್ದರು. ಸೆ.6ರಂದು ರಾಜಿನಾಮೆ ಅಂಗೀಕಾರವಾಗಿತ್ತು. ಆದ ಕಾರಣ ಅಧ್ಯಕ್ಷ ಗಾದಿಗೆ ತಾಪಂ ಉಪಾಧ್ಯಕ್ಷೆ, ಜೆಡಿಎಸ್ ಸದಸ್ಯೆ ತೀರ್ಥಮ್ಮ ದೊರೆಸ್ವಾಮಿ ಅಧಿಕಾರ ವಹಿಸಿಕೊಂಡರು. ಈ ವೇಳೆ ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ಹಾಜರಿದ್ದು ಅಭಿನಂದನೆ ಸಲ್ಲಿಸಿದರು.